ಶ್ರೀ ಜೆ. ಎಲ್. ಕಬಾಡಿ.—ಇದು ಅತೀ ಮುಖ್ಯವಾದ ಸೇತುವೆಯಾಗಿರುವುದರಿಂದ ಇದಕ್ಕೆ ಹಣ ಒದಗಿಸಿಕೊಡುವುದು ಸರ್ಕಾರದ ಮುಖ್ಯ ಧೋರಣೆಯಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಣ ಒದಗಿಸತಕ್ಕದ್ದು ಸರ್ಕಾರದ ಆಶಯವಾಗಿದೆ. ಆದರೆ ಇದಕ್ಕಿಂತಲೂ ಮುಖ್ಯವಾದವುಗಳು ಇದ್ದರೆ, ಆಗ ಇದಕ್ಕೆ ಸೆಕೆಂಡ್ ಪ್ರಿಫರೆನ್ಸ್ ಕೊಡಬೇಕಾಗುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಸೆಕೆಂಡ್ ಪ್ರಿಫರೆನ್ಸ್ ಎಂದು ತಿಳಿದುಕೊಂಡು ಕೈಬಿಡರಾಗಿದೆಯೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದುವರೆಗೆ ಅಂದಾಜು ಮಾಡಿದ್ದರಲ್ಲಿ ಸೆಕೆಂಡ್ ಪ್ರಿಫರೆನ್ಸ್ ಕೊಟ್ಟಿದ್ದಾರೆ. ಈಗ ಫಸ್ಟ್ ಪ್ರಿಫರೆನ್ಸ್ ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಆಲೋಚನೆ ಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಏಕೆಂದರೆ ಇದು ಬಿಜಾಪುರ-ಪಂಡರಾಪುರ ರಸ್ತೆಯ ಹತ್ತಿರ ಇದ್ದು ದೊಡ್ಡ ಯಾತ್ರಾಸ್ಥಳಗಳಿಗೆ ಹೋಗತಕ್ಕ ದಾರಿಯಲ್ಲದೆ ; ಅದಲ್ಲದೆ ಮುಂಬಾಯಿ-ಪೂನಾ ಮತ್ತು ಬಿಜಾಪುರಕ್ಕೆ ಹೋಗುವ ದಾರಿಯಲ್ಲದೆ. ಆದ್ದರಿಂದ ಈ ವರ್ಷದಲ್ಲಿ ಕಟ್ಟುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಎಚ್ ಎಂ. ಚನ್ನಬಸಪ್ಪ.—ಇದು ಬಹಳ ಪ್ರಾಮುಖ್ಯವಾದ ರಸ್ತೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಅದಲ್ಲದೆ ಪಂಡರಾಪುರ ಮುಂತಾದ ಯಾತ್ರಾಸ್ಥಳಗಳಿಗೆ ಉಪಯೋಗವಾಗ ತಕ್ಕ ರಸ್ತೆ ಎಂದೂ ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಸದಸ್ಯರು ಹೇಳತಕ್ಕ ವಿಚಾರಕ್ಕೆ ಸರ್ಕಾರದವರು ತೀವ್ರತೆಯನ್ನು ಕೊಟ್ಟು ಅದನ್ನು ಗಮನದಲ್ಲಿಟ್ಟುಕೊಳ್ಳುತ್ತಾರೆ.

Construction of Ayacut Roads in T. B. P. Area in Bellary District

187. Sri B. E. RAMAIAH (Siruguppa).—

Will the Minister of State for Major Irrigation be pleased to state:—

(*a*) whether it is a fact that the financial sanction was accorded for the construction of ayacut roads in T. B. Project area in Bellary District in 1960 ;

(*b*) if so, the reasons for not taking up the works so far ;

(*c*) when Government would complete all these roads ?

Sri H. N. NANJE GOWDA (Minister of State for Major Irrigation).—

(*a*) Yes.

(*b*) All the roads sanctioned since 1960 have been taken up and are in various stages of progress.

(*c*) By the end of March 1974 subject to availability of funds.

ಶ್ರೀ ಬಿ. ಇ. ರಾಮಯ್ಯ.—ಇದಕ್ಕೆ ಎಸ್ಟಿಮೇಟ್ ಎಷ್ಟು ಸ್ಯಾಂಕ್ಷನ್ ಮಾಡಿದ್ದೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಒಟ್ಟು ರಸ್ತೆಗಳ ಉದ್ದ 177 ಮೈಲಿಗಳು. ಇದರಲ್ಲಿ 38 ಮೈಲಿ ಆಯಕಟ್ಟಿನ ರೈಟ್ ಬ್ಯಾಂಕ್ ಕೆಳಗಡೆ ತೆಗೆದುಕೊಳ್ಳಲಾಗುತ್ತದೆ. ಅದರಲ್ಲಿ 24½ ಮೈಲಿ ರಸ್ತೆಯನ್ನು ರೆಗ್ಯುಲರ್ ಪಿ ಡಬ್ಲ್ಯು ಡಿಯವರು ವಹಿಸಿಕೊಂಡಿದ್ದಾರೆ. ಉಳಿದ 13½ ಮೈಲಿ 6 ವರ್ಕಾಂಗಿಗೆ 86 ಲಕ್ಷದ 86 ಸಾವಿರ ಚಿಲ್ಲರೆ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಇದುವರೆಗೂ 57 ಲಕ್ಷ ಖರ್ಚಾಗಿದೆ. ಉಳಿದುದನ್ನು 1974ರೊಳಗೆ ಖರ್ಚು ಮಾಡುವುದಕ್ಕೆ ಅಂದಾಜು ಮಾಡಲಾಗಿದೆ.

ಶ್ರೀ ಬಿ. ಇ. ರಾಮಯ್ಯ.—ಇದಕ್ಕೆ 14 ವರ್ಷವಾದರೂ ಇದುವರೆಗೂ ಪೂರ್ತಿಯಾಗದಿರುವುದಕ್ಕೆ ಕಾರಣವೇನು ? ಮೊದಲು 5 ವರ್ಷದೊಳಗೆ ಪೂರ್ತಿ ಮಾಡಬೇಕೆಂದು ಹೇಳುತ್ತಿದ್ದರು.

ಶ್ರೀ ಎಚ್. ಎನ್. ನಂಜೇಗೌಡ.—ನನ್ನ ಮಾಹಿತಿ ಪ್ರಕಾರ 1974 ರೊಳಗೆ ಮುಗಿಸಬೇಕೆಂದು ಅಂದಾಜಾಗಿದೆ; of course, subject to the availability of funds.

ಶ್ರೀ ಬಿ. ಇ. ರಾಮಯ್ಯ.—ಇನ್ನಾದರೂ 1974ರೊಳಗೆ ಮುಗಿಸುತ್ತೀರಾ ಹೇಗೆ? ಏಕೆಂದರೆ ಇದು ಬಹಳ ಅವಶ್ಯವಾಗಿ ಬೇಕಾಗಿರುವಂತಹ ರೋಡು.

ಶ್ರೀ ಎಚ್. ಎನ್. ನಂಜೇಗೌಡ.—ಇನ್ನು ಸ್ಪಿಲ್ ಓವರ್ ವರ್ಕಿಗೆ 29 ಲಕ್ಷದ 79 ಸಾವಿರ ರೂಪಾಯಿ ಬೇಕಾಗುತ್ತದೆ. ಈ ಹಣವನ್ನು 1974ರೊಳಗೆ ಖರ್ಚು ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಆದರೆ ಮೊದಲೇ ಹೇಳಿದ ಹಾಗೆ Subject to the availability of funds.

Expenditure per acre under M. I. Schemes

195. Sri B. BYRAPPAJI (Turuvekere).—

Will the Minister for Public Works and Electricity be pleased to state :—

(*a*) the amount of expenditure fixed per acre under Minor Irrigation Scheme ;

(*b*) the year in which it was fixed ;

(*c*) the basis on which it was fixed ;

(*d*) whether it has come to their notice that due to the amount fixed being less difficulty has been experienced in obtaining sanction to the several estimates prepared ;

(*e*) if so, whether they have taken any action to reconsider and increase the amount fixed ?

Sri H. M. CHANNABASAPPA (Minister for Public Works and Electricity).—

(*a*) The amount fixed as per G. O. No. PWD 73 IIB 66, dated 4/10th September 1968 is as follows :

	Per acre	
	In an area of 24″ and more than 24″ of average rainfall.	In an area of 24″ and less than 24″ of rainfall.
	Rs.	Rs.
(i) Irrigation works with 100 and less than 100 acres of achkat ...	1,250	1,500
(ii) Irrigation works with more than 100 acres of achkat ...	1,250	1,500
(iii) Restoration of tanks ...	1,000	1,000